ಕಲಿತಿದ್ದ. ಶೀನಪ್ಪ ಇಲ್ಲದಿದ್ದರೂ ಅಂಗಡಿ ನಡೆಸಿಕೊಂಡು ಹೋಗುವಷ್ಟು ತರಬೇತಾಗಿದ್ದ. ಅದೇನು ಆಕಸ್ಮಿಕವೋ? ಶೀನಪ್ಪ ಕಾಯಿಲೆಯಾಗಿ ಹಾಸಿಗೆ ಹಿಡಿದ. ಇನ್ನು ತನ್ನಿಂದಾಗದು ಅನ್ನಿಸಿ, ಬಾಬಣ್ಣ, ಸಾವಿತ್ರಿಯರನ್ನು ಮನೆಗೆ ಕರೆಸಿ ಅಂಗಡಿಯನ್ನ ಮನೋಹರನಿಗೆ ಒಪ್ಪಿಸುವ ಪ್ರಸ್ತಾವವಿಟ್ಟ. ಆತನ ಮಕ್ಕಳೆಲ್ಲ ಸರಿಯಾದ ಉದ್ಯೋಗದಲ್ಲಿ ಹೊರ ಊರಲ್ಲಿದ್ದ ಕಾರಣ ಅವರೇನೂ ಇಲ್ಲಿ ಬರುವವರಲ್ಲ. ತಾನು ಕಷ್ಟದಿಂದ ನಡೆಸಿಕೊಂಡುಬಂದ ಅಂಗಡಿ ಮುಂದುವರೆಯಲಿ ಎನ್ನುವದು ಅವನ ಒಳ ಆಶಯವಾಗಿತ್ತೇನೋ? ಎಷ್ಟು ಕೊಡ್ತೀರೋ ಅಷ್ಟು ತಗೋತೀನಿ ಎಂದ ಶೀನಪ್ಪ ಸಾಂಪ್ರದಾಯಿಕವಾಗಿ ಒಂದಷ್ಟು ಹಣ ಪಡೆದು ಮನೋಹರನಿಗೆ ಆ ಅಂಗಡಿ ವಹಿಸಿಕೊಟ್ಟಿದ್ದ.

ಆವರೆಗೆ ಪುರಾತನ ಶೈಲಿಯಲ್ಲಿದ್ದ ತಮ್ಮ ಕೆಲಸಗಳಿಗೆ ಮನೋಹರ ಹೊಸರೂಪ ಕೊಡತೊಡಗಿದ. ಆಧುನಿಕ ವಿನ್ಯಾಸಗಳನ್ನ ಬಳಸತೊಡಗಿದ. ಕಾಲಕ್ಕೆ ಹೊಂದುವಂತೆ, ಜನರ ಮರ್ಜಿಗೆ ಸ್ಪಂದಿಸುವ ರೀತಿ ಅವನಿಗೆ ಹೆಸರು ತಂದುಕೊಟ್ಟಿತು. ಸಂಪಾದನೆಯೂ ಕುದುರಿತು.

ಸುಮಾರು ಹೊತ್ತಿನತನಕ ಅದೂ, ಇದು ಮಾಡಿಕೊಳ್ಳುತ್ತ ಕುಳಿತ ಮನೋಹರನಿಗೆ ಕೆಲಸ ಮಾಡುವದು ಅಸಾಧ್ಯ ಅನ್ನಿಸಿತು. ಮನಸ್ಸು ಮುರುಟಿಕೊಳ್ಳುತ್ತ, ತಲೆ ಜೋಮುಗಟ್ಟಿದಂತಾಗಿ ಒದ್ದಾಡುತ್ತ ಎಲ್ಲಾದರೂ ಒಬ್ಬನೇ ಕೂರಬೇಕು ಅಂದುಕೊಂಡ. ಗೋಪಿಗೆ 'ನಾನು ಬರೋದು ತಡವಾದ್ರೆ ಬಾಗಿಲು ಹಾಕು. ಮಧ್ಯಾಹ್ನ ಬಂದು ತೆಗೆ' ಎಂದಷ್ಟೇ ಹೇಳಿ ಹೊರನಡೆದು ಬಿಟ್ಟ. ಅವನ ಮುಖಭಾವ, ಕ್ಷೀಣಸ್ವರ ಗಮನಿಸಿದ ಗೋಪಿಗೆ ಕರುಳು ಕಿವಿಚಿದಂತಾಯಿತು.

ಎಲ್ಲಿ ಹೋಗುವದೆಂದು ಆತ ನಿಶ್ಚಯಿಸದಿದ್ದರೂ ಮನೋಹರನ ಕಾಲುಗಳು ದೇವಸ್ಥಾನದತ್ತ ಚಲಿಸಿದ್ದವು. ಅದರ ಪಕ್ಕದ ಕೆರೆಯ ದಂಡೆಯ ಆಲದ ಮರದ ಬೊಡ್ಡೆಗೆ ಆತು ಕುಳಿತು ಕಣ್ಣುಮುಚ್ಚಿ ಒಳಗಿನ ಒತ್ತಡವನ್ನು ನಿಯಂತ್ರಿಸುವ ಪ್ರಯತ್ನ ಮಾಡಿದ.

ಹಾಗೇ ಮನೋಹರನನ್ನು ಪ್ರಕ್ಷುಬ್ಧಗೊಳಿಸಿದ ಘಟನೆ ಹಿಂದಿನ ರಾತ್ರಿ ಅಂಗಡಿ ಬಾಗಿಲು ಹಾಕಿ ಮನೆಗೆ ಹೋಗಿ ಊಟಕ್ಕೆ ತಯ್ಯಾರಿ ಮಾಡಬೇಕೆಂದಿದ್ದಾಗ ನಡೆದಿತ್ತು. ಅವರ ಕೇರಿಯವನೇ ಆದ ಗೋವಿಂದಣ್ಣ ದಣಪೆಗೋಲು ಸರಿಸುತ್ತಲೇ, 'ಸಾವಿತ್ರಕ್ಕ, ಮನ್ನೂ ಬಂದನಾ, ಚೂರು ಮಾತಾಡೋದಿತ್ತು' ಎನ್ನುತ್ತ ಬಂದಿದ್ದ. ಅವನ ಧ್ವನಿಯಲ್ಲಿ ಕಂಡೂಕಾಣದ ಸಂಭ್ರಮವಿತ್ತು. ಊರಿನಲ್ಲಿ ಅವನಿಗಿಂತ ಚಿಕ್ಕವರಿರಲಿ, ದೊಡ್ಡವರಿರಲಿ, ಎಲ್ಲರ ಬಾಯಲ್ಲೂ ಗೋವಿಂದಣ್ಣ ಎಂದೇ ಕರೆಸಿಕೊಳ್ಳುತ್ತಿದ್ದ ಆತ ಹೃದಯವಂತ ಮನುಷ್ಯ. ತಾನು ಕಷ್ಟದಲ್ಲಿದ್ದರೂ ಯಾರದ್ದೇ ಕಷ್ಟಕ್ಕೂ ತಾನೇ ಮುಂದೆ ಬರುವಂಥವ. ಅವನ ಮಾತು ಕೇಳಿಸಿದ್ದೇ ಸಾವಿತ್ರಿ 'ಬಾರೋ ಗೋವಿಂದಣ್ಣ, ಮನ್ನೂ ಬಂದಾನೆ' ಎಂದು ಒಳಕರೆದು ಕೂರಲು ಆರಾಮು ಕುರ್ಚಿ ಕೊಟ್ಟಳು. 'ಇವತ್ತಿನದು ಹಣ್ಣಾಯ್ತೋ, ಕಾಯೋ?' ಎಂದ ಅವಳ ಪ್ರಶ್ನೆಗೆ ಕುರ್ಚಿಯ ಮೇಲೆ ಕೂರುತ್ತಲೇ ಪ್ರವರ ಶುರು ಹಚ್ಚಿಬಿಟ್ಟ. 'ದೇವರ ತಲಿಮ್ಯಾಲೆ ಹೂ ಮುಡಿಸಿದಷ್ಟು ಹಗುರ ಆಯ್ತೆ. ಹುಡುಗಿ ನೋಡುಕೇ ಅಂತಾ ಬಂದೋರು ಪದೇ ಪದೇ ಬರೂಕಾಗುದಿಲ್ಲ, ಲಗ್ನದ ದಿನಾನೂ ನಿಕ್ಕಿ ಮಾಡ್ವೋ ಅಂತಾ ಗಟ್ಟಿ ಕೂತೇ ಬಿಟ್ರೆ. ಹುಡುಗ, ಹುಡುಗಿಗೆ ಒಪ್ಗೆ ಆದ್ರೆ ನಂದೆಂತದೂ. ಗಣಪು ಭಟ್ರಲ್ಲಿ ಹೋಗಿ ಇಬ್ಬರ ತಾರಾನುಕೂಲ ನೋಡ್ಸಿ, ದಿನಾ ಫಿಕ್ಸ್ ಮಾಡಿಬಂದದ್ದೇ. ಇಕಾ, ಇವತ್ತಿಗೆ ಹದಿನೈದೇ ದಿನಕ್ಕೆ ಮದ್ವೆ; ಮೇಲಿನಕೇರಿ ಭೂತೇಶ್ವರಿ ಕಲ್ಯಾಣಮಂಟಪದಲ್ಲಿ. ಅದೂ ಮಾತಾಡಿ ಅಡ್ವಾನ್ಸ್ ಕೊಟ್ಟು ನೆಂಟರನ್ನ ಕಳಿಸಿಕೊಟ್ಟು ಬಂದೆ' ಎಂದು ಒಂದೇ ಉಸುರಿಗೆ ಹೇಳಿದ. ಅವನ ಮಾತಿನಲ್ಲಿ ಖುಷಿ, ಮುಂದಿನದು ಹೇಗಾಗುತ್ತೋ ಎನ್ನುವ ದುಗುಡಗಳೆಲ್ಲ ಇದ್ದವು. ಅವನ ಮಾತುಗಳನ್ನ ಕೇಳಿಸಿಕೊಳ್ಳುತ್ತಿದ್ದ ಮನೋಹರನಿಗೆ ತಲೆಬುಡ ಹತ್ತದೇ ಪ್ರಶ್ನಾರ್ಥಕ ಮುಖಭಾವದಲ್ಲಿ ಅವನನ್ನ ನೋಡುತ್ತಿದ್ದ.